ವಿಶ್ವಬ್ಯಾಂಕ್ ಯೋಜನೆಯ ಕುಡಿಯುವ ನೀರಿನ ಯೋಜನೆ

1232 (1614) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಯಯ್ಯ) (ತುರುವೇಕೆರೆ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕೈಗೊಳ್ಳಲಾದ ಕುಡಿಯುವ ನೀರು ಕಾಮಗಾರಿಯನ್ನು ಮೌಲ್ಯಮಾಪನ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

2) ಈ ಯೋಜನೆ ಅನುಷ್ಠಾನದಲ್ಲಿ ಲೋಪ ದೋಷಗಳು ಕಂಡು ಬಂದಿದೆಯೇ;

3) ಈ ನಿಟ್ಟಿನಲ್ಲಿ ನೈರ್ಮಲ್ಯ ಕಾಪಾಡಲು ಗ್ರಾಮಗಳಲ್ಲಿ ನೆಲಹಾಸು ಹಾಕಲು ತೀರ್ಮಾನಿಸಲಾಗಿದೆಯೇ;

4) ಇವು ಯಾವಾಗಿನಿಂದ ಕಾರ್ಯಾನುಷ್ಠಾನಕ್ಕೆ ಬರುತ್ತವೆ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) ;

1) ಮೆ. ಟಾಟಾ ಕನ್ಸಲ್‌ಟೆನ್ಸಿ, ಬೆಂಗಳೂರು ಇವರಿಂದ 2000-01 ರಲ್ಲಿ ಒಂದು ಪ್ರಭಾವ ಮೌಲ್ಯಮಾಪನ (ಇಂಪ್ಯಾಕ್ಟ್ ಇವಾಲ್ಯುಯೇಶನ್) ಅಧ್ಯಯನ ನಡೆಸಲಾಗಿತ್ತು. ಹತ್ತು ಜಿಲ್ಲೆಗಳಲ್ಲಿ ಒಂದನೇ ಹಂತದ ಕಾಮಗಾರಿಗಳ ನಿರ್ವಹಣೆ ಬಗ್ಗೆ ವರದಿ ಸಲ್ಲಿಸಲು ಇಬ್ಬರು ತಜ್ಞರನ್ನೊಳಗೊಂಡ ಸಮಿತಿಯನ್ನು 2000-01ನೇ ಸಾಲಿನಲ್ಲಿ ರಚಿಸಲಾಗಿತ್ತು.

2) ಮೌಲ್ಯಮಾಪನದಲ್ಲಿ ಕಂಡು ಬಂದ ಮುಖ್ಯ ಲೋಪದೋಷಗಳೆಂದರೆ - ನೀರು ಸರಬರಾಜು ಯೋಜನೆಗಳಿಗೆ ಭೂ ಸ್ವಾಧೀನ ಪಡಿಸಿಕೊಳ್ಳುವುದರಲ್ಲಿ ವಿಳಂಬ, ನೀರು ಸರಬರಾಜು ಯೋಜನೆಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದರಲ್ಲಿ ವಿಳಂಬ, ಕೆಲವು ಗ್ರಾಮಗಳಲ್ಲಿ ಜಲ ಸಂಸ್ಕರಣ ಘಟಕಗಳ ಕಾರ್ಯನಿರ್ವಹಣೆಯಲ್ಲಿ ವಿಫಲತೆ, ಕೆಲವು ಗ್ರಾಮಗಳಲ್ಲಿ ವಾಲ್ವ್‌ಗಳನ್ನು ಸರಿಯಾದ ಜಾಗದಲ್ಲಿ ಜೋಡಿಸದಿರುವುದು, ರೈಸಿಂಗ್ ಮೈನ್, ವಿತರಣ ಪೈಪು ಹಾಗೂ ಮೇಲು ತೊಟ್ಟಿ ಇವುಗಳಲ್ಲಿ ನೀರು ಸೋರುವಿಕೆ ಇತ್ಯಾದಿ ಕಡಿಮೆ ಗುಣಮಟ್ಟದ ಕಾಮಗಾರಿಗಳು.

3) ವಿಶ್ವಬ್ಯಾಂಕ್ ನೆರವಿನ ಯೋಜನೆ-2, ಜಲ ನಿರ್ಮಲ ಯೋಜನೆಯಡಿಯಲ್ಲಿ ಗ್ರಾಮಗಳ ಒಳ ರಸ್ತೆ ಹಾಗೂ ಬೀದಿಗಳಲ್ಲಿ ನೆಲ ಹಾಸು ಹಾಕುವ ಹಾಗೂ ನೈರ್ಮಲ್ಯ ಕಾಮಗಾರಿಗಳನ್ನು ಸ್ವಚ್ಛ ಗ್ರಾಮ ಯೋಜನೆಯ ತತ್ವದಂತೆ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

4) ದಿನಾಂಕ 11-02-2002 ರಂದು "ಜಲ ನಿರ್ಮಲ" ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯ ಅವಧಿಯು ಆರು ವರ್ಷಗಳಾಗಿರುತ್ತದೆ.

(ಜನವರಿ 2002 ರಿಂದ ಡಿಸೆಂಬರ್ 2007).

ಬಸವಕಲ್ಯಾಣ ನಗರದಲ್ಲಿ ಸರ್ಕಾರಿ ಶಾಲೆಗಳಿಗೆ ಕಟ್ಟಡದ ಕೊರತೆ

1234 (1567) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣ ನಗರದಲ್ಲಿರುವ ಸರ್ಕಾರಿ ಎಂ.ಪಿ.ಹೆಚ್.ಎಸ್ ಶಾಲೆಯು ನಾಲ್ಕು ಮಾಧ್ಯಮಗಳಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಶಾಲೆಯು ಎಂದು ಪ್ರಾರಂಭವಾಯಿತು;

ಇ) ಈ ಶಾಲೆಯ ಕಟ್ಟಡವು ಅತ್ಯಂತ ಹಳೆಯದಾಗಿದ್ದು, ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;